

ಶಶಿಧರ ಹಳೇಮನಿ

# ಕೋಗಿಲೆ ಮತ್ತು ನವಿಲು

**ಬಸಪ್ಪ ಸೊ. ಮುಳ್ಳೂರ, ಹಲಗತ್ತಿ**

ಒಂದು ಕಾಡಿನಲ್ಲಿ ಭಾರಿ ಗಾತ್ರದ ಒಂದು ಮರ ಇತ್ತು. ಆ ಮರದಲ್ಲಿ ಒಂದು ಕೋಗಿಲೆ ವಾಸವಾಗಿತ್ತು. ಅದು ಮುಂಜಾನೆ ಹಾಡುತ್ತಾ ಸಂಗೀತ ಅಭ್ಯಾಸ ಮಾಡುತ್ತಿತ್ತು. ಅದರ ಗಾನ ಕಾಡಿನ ತುಂಬಾ ಕೇಳಿಸುತ್ತಿತ್ತು. ಇದರಿಂದ ತುಂಬಾ ತೊಂದರೆಯಾಗುತ್ತಿದೆ ಎಂದು ಕಾಡಿನ ಪ್ರಾಣಿಗಳೆಲ್ಲಾ ಕೋಗಿಲೆಯ ವಿರುದ್ಧ ಕಾಡಿನ ಮುಖ್ಯ ಪ್ರಾಣಿಗೆ ದೂರು ಕೊಟ್ಟವು.

ಆಗ ಮುಖ್ಯ ಪ್ರಾಣಿ ನರಿ ಎಲ್ಲಾ ಪ್ರಾಣಿಗಳು ಪಂಚಾಯಿತಿ ಕಟ್ಟೆಗೆ ಬರಬೇಕೆಂದು ಡಂಗುರ ಸಾರಿಸಿತು. ಎಲ್ಲ ಪ್ರಾಣಿಗಳು ಸೇರಿದ ಮೇಲೆ ಚರ್ಚೆ ಮಾಡಿದವು. ಆಮೇಲೆ ನರಿಯು ಕೋಗಿಲೆಯನ್ನು ಕರೆದುಕೊಂಡು ಬಂತು. ಕೋಗಿಲೆಗೆ ವಿಷಯ ಏನೆಂದು ತಿಳಿದಿರಲಿಲ್ಲ. ಮುಖ್ಯ ಪ್ರಾಣಿ ನರಿ. ಕೋಗಿಲೆಗೆ ನಿನ್ನ ಮೇಲೆ ಅಪವಾದವಿದೆ ಕಾಡಿನ ಪ್ರಾಣಿಗಳನ್ನು ನಿನ್ನ ಮೇಲೆ ದೂರು ಕೊಟ್ಟರುತ್ತೇವೆ. ನಿನ್ನ ಸಂಗೀತ ಅಭ್ಯಾಸ ಇಲ್ಲಿ ಎಲ್ಲರಿಗೂ ತೊಂದರೆಯಾಗುತ್ತದೆ ಎಂದು ನಿನ್ನನ್ನು ಕಾಡಿನಿಂದ ಹೊರಗೆ ದಬ್ಬಬೇಕೆಂದು ಹೇಳುತ್ತವೆ. ಇದಕ್ಕೆ ನಿನ್ನ ಅಭಿಪ್ರಾಯವೇನು? ಎಂದು ಕೇಳಿತು.

ಅದಕ್ಕೆ ಕೋಗಿಲೆ ನಾನೇನು ಮಾಡಲಿ ನನಗೆ ಸಂಗೀತ ಕೋಗಿಲೆ ಎಂದು ನಾಮಾಂಕಿತ ಆಗಿದೆ. ಎಲ್ಲ ಗಾನ ಕೋಗಿಲೆ ಎಂದೇ ಹಾಡಿ ಹೊಗಳುತ್ತಾರೆ. ಹೀಗಿರುವಾಗ ನಾನು ಹಾಡುವುದನ್ನು ನಿಲ್ಲಿಸಲು ಹೇಗೆ ಸಾಧ್ಯ? ಎಂದು ಮರು ಪ್ರಶ್ನೆ ಹಾಕಿತು.

ಆಗ ಮಧ್ಯೆ ಪ್ರವೇಶಿಸಿದ ನವಿಲು ಈಗ ಯಾರು ಏನು ಹೇಳುವುದು ಬೇಡ. ಈಗ ಒಂದು ಗಾಯನವನ್ನು ಏರ್ಪಡಿಸೋಣ. ಕೋಗಿಲೆಯ ಕಂಠದಿಂದ ಯಾರಿಗೆ ತೊಂದರೆಯಾಗುತ್ತದೆ ಎಂಬುದನ್ನು ನೋಡೋಣ. ಈಗ ಕೋಗಿಲೆ ತನ್ನ ಗಾಯನವನ್ನು ಆರಂಭಿಸಲಿ. ಅದನ್ನು ಸಂಪೂರ್ಣ ಕೇಳಿದ ನಂತರ ಮುಂದೆ ಅದರ ಬಗ್ಗೆ ಆಲೋಚನೆ ಮಾಡೋಣ ಎಂದು ನವಿಲು ಹೇಳಿತು.

ನವಿಲಿನ ಈ ಪ್ರಸ್ತಾಪವನ್ನು ಎಲ್ಲ ಪ್ರಾಣಿಗಳು ಒಪ್ಪಿದವು. ಆಮೇಲೆ ಕೋಗಿಲೆ ಹಾಡಲು ಶುರು ಮಾಡಿತು. ಎಲ್ಲಾ ಪ್ರಾಣಿಗಳು ಕೋಗಿಲೆ ಹಾಡು ಕೇಳಿ ಮೈಮರೆತವು. ಸಂಗೀತ–ಗಾಯನ ಮುಗಿದರೂ ಕೂಡ ಪ್ರಾಣಿಗಳು ಕಣ್ಣು ಮುಚ್ಚಿ ಯೋಗನಿದ್ರಾ ಅವಸ್ಥೆಯಲ್ಲಿ ಇದ್ದವು.

ಗಾಯನದ ಕೆಲ ನಿಮಿಷಗಳ ನಂತರ ವಾಸ್ತವಕ್ಕೆ ನೆರದಿದ್ದ ಪ್ರಾಣಿಗಳು ಬಂದವು. ಆಮೇಲೆ ಮಹತ್ವದ ಒಂದು ನಿರ್ಣಯವನ್ನೂ ಕೈಗೊಂಡವು. ಅಂದಿನ ಸಭೆಯಲ್ಲಿ ನಿರ್ಧರಿಸಿದ ಪ್ರಮುಖ ಅಂಶಗಳೇನೆಂದರೆ ಕೋಗಿಲೆ ವಿರುದ್ಧ ಕೇಳಿಬಂದ ಆರೋಪವನ್ನು ಹಿಂದಕ್ಕೆ ಪಡೆಯುವುದು. ಸಲ್ಲದ ದೂರನ್ನು ನಿರಾಕರಿಸಿದ ಸಭೆ ಮುಂದೆ ಕಾಡಿನಲ್ಲಿ ಯಾವುದೇ ಸಮಾರಂಭ ನಡೆದರೂ ಕೋಗಿಲೆಯ ಗಾಯನ ಕಡ್ಡಾಯವಾಗಿ ಇರಬೇಕು ಎಂದು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಮಾತ್ರವಲ್ಲದೆ, ಗಾಯನ ಕಲೆಯಲ್ಲಿ ಮನುಷ್ಯನಿಗೂ ಮಾದರಿಯಾಗಿರುವ ಕೋಗಿಲೆಯನ್ನು ಗೌರವದಿಂದ ಕಾಣಬೇಕೆಂದು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ನರಿ ಸಭೆಯ ನಿರ್ಣಯವನ್ನು ಪ್ರಕಟಿಸಿತು. ಇದನ್ನು ಕೇಳಿ ಕೋಗಿಲೆ ಸಂತೋಷದಿಂದ ನವಿಲಿಗೆ ನನ್ನ ಕಷ್ಟಕ್ಕೆ ನೆರವಾದ ನಿನಗೆ ನನ್ನ ಧನ್ಯವಾದಗಳು ಎಂದು ಹೇಳಿತು. ಅಂದಿನಿಂದ ಕೋಗಿಲೆ ಮತ್ತು ನವಿಲು ಒಳ್ಳೆಯ ಗೆಳೆಯರಾಗಿ ಕಾಡಿನೊಳಗೆ ಸಂತೋಷದಿಂದ ಬದುಕಿದವು.